**ದಿನಾಂಕ 21.03.2023 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಪಾಟೀಸವಾಲುಃ ಶ್ರೀ ಎಸ್.ಬಿ. ವಕೀಲರಿಂದಃ</u>**

1. ನಾನು 7 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ನನ ದಾವೆ ಸಲ್ಲಿಸುವ ಸಮಯದಲ್ಲಿ ನನಗೆ 50 ವರ್ಷ ವಯಸ್ಸು ಎಂದು ಹಾಕಿದ್ದು ಅದು ಸರಿಯಾಗಿದೆ. ನನ್ನ ತಂದೆಯ ಹೆಸರು ನರಸಿಂಹಯ್ಯ, ನನ್ನ ತಾತನ ಹೆಸರು ವನದಾಸಪ್ಪ. ನನ್ನ ತಂದೆಯನ್ನು ನರಸಿಂಹ ಎಂದು ಹಾಗೂ ನನ್ನ ತಾತನನ್ನು ವನದಾಸಿ ಎಂದು ಕರೆಯುತ್ತಿದ್ದರು. ನನ್ನ ತಾತನ ತಂದೆಯ ಹೆಸರು ಕದುರ ಎಂದರೆ ಸರಿ. ಸದರಿಯವರನ್ನು ಕದುರುದಾಸಿ ಎಂದು ಕರೆಯುತ್ತಿದ್ದರು ಎಂದರೆ ಸರಿ. ಸದರಿ ಕದುರಪ್ಪನವರ ದಾಸಿ ಆದ್ದರಿಂದ ಅವರನ್ನು ಕದುರುದಾಸಿ ಎಂದು ಕರೆಯುತ್ತಿದ್ದರು ಎಂದರೆ ಸರಿ. ದಾವೆಯಲ್ಲಿ ಇರುವ ವಾದಿ ಸಂಖ್ಯೆ 1 ಹನುಮಕ್ಕ ನನ್ನ ತಾಯಿ, 2 ಮತ್ತು 3 ನೇ ವಾದಿಗಳು ನನ್ನ ಅಕ್ಕಂದಿರು ಹಾಗೂ 4 ನೇ ವಾದಿ ನನ್ನ ತಮ್ಮ ಎಂದರೆ ಸರಿ.
2. ಸರ್ವೆ ನಂ. 72 ಪೋಡಾಗಿದೆ ಎಂದರೆ ಸರಿಯಲ್ಲ, ಅದು ಪೋಡಾಗಿಲ್ಲ. ಸರ್ವೆ ನಂ. 72 10 ಎಕರೆ ಇದೆ. ಸದರಿ ಜಮೀನು ನಮ್ಮ ಮುತ್ತಾತ ಕದುರದಾಸಿಗೆ ಸೇರಿದೆ ಎಂದರೆ ಸರಿ. ನಮ್ಮ ಮುತ್ತಾತ ಕದುರದಾಸಿ ಸತ್ತ ನಂತರ ಅವರ ಒಬ್ಬನೇ ಮಗ ವನದಾಸಯ್ಯನಿಗೆ ಸದರಿ ಆಸ್ತಿ ಬಂದಿದೆ ಎಂದರೆ ಸರಿ. ವನದಾಸಪ್ಪನಿಗೆ ನಿಂಗಮ್ಮ ಹೆಂಡತಿ ಎಂದರೆ ಸರಿ. ವನದಾಸಪ್ಪ ಮತ್ತು ನಿಂಗಮ್ಮನಿಗೆ ಒಬ್ಬನೇ ಮಗ ನರಸಿಂಹಯ್ಯ ಅದು ನನ್ನ ತಂದೆ ಎಂದರೆ ಸರಿ. ನಮ್ಮ ತಾತ ಮತ್ತು ನನ್ನ ತಂದೆ ಇಬ್ಬರೂ ಸಹ ಒಟ್ಟು ಕುಟುಂಬದಲ್ಲಿ ಸದರಿ ಆಸ್ತಿಯನ್ನು ಅವರ ಜೀವಂತಕಾಲದಲ್ಲಿ ಅನುಭವಿಸುತ್ತಿದ್ದರು ಎಂದರೆ ಸರಿ. 10 ಎಕರೆ ಜಮೀನಿನಲ್ಲಿ ಪೂರ್ವ ದಿಕ್ಕಿನ 5 ಎಕರೆ ಜಮೀನನ್ನು 06.11.1941 ರ ಸಾಲಿನಲ್ಲಿ ಶಿರಾದ ಲಿಂಗಣ್ಣನ ಮಗ ಹನುಮಂತಪ್ಪನಿಗೆ ನಾನು ಹುಟ್ಟುವ ಮೊದಲೇ ನೊಂದಾಯಿತ ಕ್ರಯ ಪತ್ರದ ಮುಖಾಂತರ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರದ ಆಸ್ತಿಯನ್ನು ಅದೇ ದಿನ ಸ್ವಾಧೀನತೆಯನ್ನು ಹನುಮಂತಪ್ಪನಿಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.
3. ಅದೇ ರೀತಿ ಕ್ರಯ ಪತ್ರದ ಆಧಾರದ ಮೇಲೆ ಲಿಂಗಣ್ಣನ ಮಗ ಹನುಮಂತಪ್ಪನಿಗೆ ಪಹಣಿ ಪತ್ರಿಕೆಗಳು ಮತ್ತು ಖಾತೆ ಬದಲಾಗಿರುತ್ತದೆ ಎಂದರೆ ಸರಿಯಲ್ಲ. ಹನುಮಂತಪ್ಪ 5 ಎಕರೆ

ಜಮೀನಿನಲ್ಲಿ ಕ್ರಯವಾದ ದಿನದಿಂದ ಅವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಹನುಮಂತಪ್ಪನಿಗೆ ಇಬ್ಬರು ಗಂಡು ಮಕ್ಕಳು ಅವರುಗಳೆಂದರೆ ರಂಗನಾಥಪ್ಪ ಮತ್ತು ಚೆನ್ನಪ್ಪ ಎಂದರೆ ನನಗೆ ಗೊತ್ತಿಲ್ಲ. ಹನುಮಂತಪ್ಪ ಸತ್ತ ನಂತರ ಅವರ ಮಕ್ಕಳು ರಂಗನಾಥಪ್ಪ ಮತ್ತು ಚೆನ್ನಪ್ಪ ಇಬ್ಬರೂ ಸಹ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗದಿಂದ ಸಂಪೂರ್ಣ 5 ಎಕರೆ ಜಮೀನು ರಂಗನಾಥನ ಹೆಸರಿಗೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ರಂಗನಾಥಪ್ಪನ ಹೆಸರಿಗೆ ಎಂ.ಆರ್. ನಂತೆ ಖಾತೆ ಪಹಣಿ ಬಂದಿದೆ ಎಂದರೆ ಸರಿಯಲ್ಲ, ಅದು ಪೋಡು ಆಗಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

4. 10 ಎಕರೆ ಜಮೀನಿನಲ್ಲಿ 5 ಎಕರೆ ಜಮೀನು ರಂಗನಾಥಪ್ಪನ ಹೆಸರಿಗೆ ಬಂದ ನಂತರ ಸರ್ವೆ ನಂ. 72/2 ಎಂದು ಪೋಡು ಆಗಿದೆ ಎಂದರೆ ಸರಿಯಲ್ಲ. ಉಳಿದ 5 ಎಕರೆ ಜಮೀನಿಗೆ ಇನ್ನೊಂದು ದುರಸ್ಥಾಗಿದೆ ಸರ್ವೆ ನಂ. 72/1 ಆಗಿದೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಂಗನಾಥಪ್ಪನಿಗೆ ವಿಭಾಗವಾದ ನಂತರ ಪಾಲುವಿಭಾಗದಂತೆ ಅವರೇ ಜಮೀನನ್ನು ಅನುಭವ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ದಿನಾಂಕ 15.07.2001 ರಲ್ಲಿ ರಂಗನಾಥಪ್ಪ ಮತ್ತು ಅವರ ಮಕ್ಕಳು ಸರ್ವೆ ನಂ. 72/2 ರ ಆಸ್ತಿಯನ್ನು ರೂ.1,30,000/- ರೂಪಾಯಿಗಳಿಗೆ ಪ್ರತಿವಾದಿ ಕಂಬಣ್ಣನಿಗೆ ಶುದ್ಧ ಕ್ರಯ ಪತ್ರದ ಮುಖಾಂತರ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ

5. ಅದೇ ದಿನ ಪೂರ್ವದ ದಿಕ್ಕಿನ 5 ಎಕರೆ ಜಮೀನನ್ನು ರಂಗನಾಥಪ್ಪನವರು ಕಂಬ್ಬಣ್ಣನಿಗೆ ಸ್ವಾಧೀನಕ್ಕೆ ಬಿಟ್ಟುಕೊಟ್ಟಿದ್ದಾರೆ ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ. ಕಂಬ್ಬಣ್ಣನಿಗೆ ಮ್ಯುಟೇಷನ್ ಸಂಖ್ಯೆ 18/2000-01 ರಂತೆ ಅವರ ಹೆಸರಿನಲ್ಲಿ ಪಹಣಿ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಕಂಬಣ್ಣ ಖರೀದಿ ಮಾಡಿದ ನಂತರದಿಂದ ಇಂದಿನವರೆಗೂ ಅವರೇ ಸ್ವಾಧೀನತೆಯಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ.72/2 ರ ಪಹಣಿಯನ್ನು ಸಾಕ್ಷಿಗೆ ತೋರಿಸಿ ಅದು ಯಾರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ಸದರಿ ಪಹಣಿಯನ್ನು ನೋಡಿ ಕಂಬಣ್ಣ ಬಿನ್ ಮೂಡ್ಲಪ್ಪನ ಹೆಸರಿಗೆ ಇದೆ ಎಂದು ನುಡಿಯುತ್ತಾರೆ. ಕಂಬಣ್ಣ ಜಮೀನು ಖರೀದಿ ಮಾಡಿದ ನಂತರ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಅಭಿವೃದ್ಧಿ ಪಡಿಸಿರುತ್ತಾರೆ ಎಂದರೆ ಸಾಕ್ಷಿಯು ಅವರಿಗೆ ಮಾರಾಟ ಮಾಡಿರುವುದೇ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ. 72/2 ರ ಜಮೀನಿನಲ್ಲಿ ಕೊಳವೇ ಬಾವಿ ಇದೆ ಎಂದರೆ ಸರಿ. ಸದರಿ ಕೊಳವೇ ಬಾವಿಯನ್ನು

ಕಂಬಣ್ಣನವರು ಕೊರೆಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕೊಳವೆ ಬಾವಿಯ ವಿದ್ಯುತ್ ಸಂಪರ್ಕ ಕಂಬಣ್ಣನವರ ಹೆಸರಿಗೆ ಇದೆ ಎಂದರೆ ಗೊತ್ತಿಲ್ಲ, ಬೋರ್ ವೆಲ್ ನಲ್ಲಿ ನೀರನ್ನು ಕಂಬಣ್ಣನೇ ತೆಗೆಯುತ್ತಾನೆ ಎಂದರೆ ಸರಿ.

6. ಸರ್ವೆ ನಂ. 72/2 ರ ಜಮೀನಿನಲ್ಲಿ ಎಷ್ಟು ಅಡಿಕೆ ಗಿಡಗಳು ಇವೆ ಎಂದರೆ ಸಾಕ್ಷಿಯು ಕಂಬಣ್ಣನ ಜಮೀನು ಇಲ್ಲ ಎಂದು ನುಡಿಯುತ್ತಾರೆ. ಕಂಬಣ್ಣನವರು ಬೋರ್ ವೆಲ್ ಹಾಕಿಸಿ ಅಡಿಕೆ ತೋಟವನ್ನು ಅಭಿವೃದ್ಧಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕಬಳಿಸುವ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿ ಇರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಅದು ಇಂಗ್ಲೀಷ್ ನಲ್ಲಿ ಇದೆ ಅದು ನನಗೆ ಗೊತ್ತಿಲ್ಲ ಕನ್ನಡದಲ್ಲಿ ಇದ್ದಿದ್ದರೆ ತಿಳಿಯುತ್ತಿತ್ತು ಎಂದು ನುಡಿಯುತ್ತಾರೆ. ಸದರಿ ಪ್ರಮಾಣ ಪತ್ರಕ್ಕೆ ಸಹಿ ಹಾಕಲು ಹೇಳಿದ್ದಕ್ಕೆ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

ಮರುವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**